9. ಸದನದಲ್ಲಿ ಸಚಿವರ ಗೈರು ಹಾಜರಿ:

+ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಉಪಾಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆಯಾಗುವ ಸಮಯದಲ್ಲಿ, ಆ ಮಂತ್ರಿಗಳು ಬಂದು ಇಲ್ಲಿ ಕುಳಿತುಕೊಂಡು ಕೇಳಿದರೆ ಮಿನಿಮಮ್ ಕರ್ಟಸಿ ತೋರಿಸಿದಂತಾಗುತ್ತದೆ. ದಯಮಾಡಿ ತಮ್ಮ ಕೈಲಾದರೆ ತಾವು ಅದನ್ನು ಮಾಡಿಸಬೇಕು. ಇದು ಯಾವ ಮಟ್ಟಕ್ಕೆ ಬಂದಿದೆ ಎಂದು ತಾವು ನೋಡಬಹುದು. ಮಂತ್ರಿಮಂಡಲ ಸಭೆಯನ್ನು ಕರೆದು, ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ನಿಮ್ಮನ್ನು ಮಂತ್ರಿಮಂಡಲದಿಂದ ವಜಾ ಮಾಡುತ್ತೇನೆಂದು ಎಲ್ಲರಿಗೂ ಹೇಳಿದರೂ ಕೂಡ ಇವತ್ತು ಏನಾಗಿದೆ ಸ್ವಾಮಿ? ಇಲಾಖೆಗೆ ಸಂಬಂಧಪಡದೇ ಇರುವಂಥ ಮಂತ್ರಿಗಳು ಹೊರಗಡೆ ಇರಲಿ, ಆಫೀಸರ್‌ಗಳು ಏನು ಡೈರೆಕ್ಷನ್ ತೆಗೆದುಕೊಳ್ಳುತ್ತಾರೆ? ಆಫೀಸರ್ಸ್ ಏನು ಇದರಿಂದ ಕಲಿಯುತ್ತಾರೆ? ಎಂಬುದನ್ನು ತಾವು ಹೇಳಬೇಕು. ಇಲಾಖೆಯ ಬಗ್ಗೆ ಚರ್ಚೆಯಾದಾಗ ಉಪ-ಕಾರ್ಯದರ್ಶಿಗಳು ಬಂದು ನೋಟ್ ಮಾಡಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಆರೋಗ್ಯ ಇಲಾಖೆಯ ಬಗ್ಗೆ ಬಹಳ ಮಾತನಾಡಿದ್ದಾರೆ, ಚರ್ಚೆಯ ಸಂದರ್ಭದಲ್ಲಿ ಆ ಖಾತೆಯ ಮಂತ್ರಿಗಳು ಇಲ್ಲದಿದ್ದರೆ ಒಂದು ತರಹ ಅಪಹಾಸ್ಯವಾದಂತಾಗುತ್ತದೆ. ನೋಡಿ ಕರಿಯಣ್ಣನವರೆ, ಈ ಸಭೆಗೆ ಇದು ಭೂಷಣವಾಗುವುದಿಲ್ಲ. ಇಲ್ಲಿ ನಮ್ಮ ಹಾಗೂ ನಿಮ್ಮ ಪಕ್ಷ ಎನ್ನುವ ಪ್ರಶ್ನೆ ಬರುವುದಿಲ್ಲ. ಇದು ಸಭೆಗೆ ಕೊಡತಕ್ಕಂಥ ಗೌರವ ಅಲ್ಲ. ಸದನದಲ್ಲಿ ಬಹಳಷ್ಟು ಖುರ್ಚಿಗಳು ಖಾಲಿ ಇರುತ್ತದೆ. ವೈಯಕ್ತಿಕವಾಗಿ ನಾನು ಯಾರನ್ನೂ ಟೀಕೆ ಮಾಡುತ್ತಿಲ್ಲ. ಇದು ಸರಿಯಾಗಿದೆಯೇ? ಎಂದು ತಾವು ಆಲೋಚನೆಯನ್ನು ಮಾಡಬೇಕು. ಇದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮದುವೆಗೆ ಹೋಗಿದ್ದಾರೆ, ಅದರ ಬಗ್ಗೆ ನಾನು ಅರ್ಥಮಾಡಿಕೊಳ್ಳಬಲ್ಲೆ, ಕೆಲವು ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿದ್ದಾರೆ. ಅದರ ಬಗ್ಗೆ ನಾವು ಅರ್ಥಮಾಡಿಕೊಳ್ಳುತ್ತೇವೆ. ಎಲ್ಲ ಮಂತ್ರಿಗಳನ್ನು ನಾವು ಕೇಳುವುದಿಲ್ಲ. ಡಿಮ್ಯಾಂಡ್ಸ್‌ನ್ನು ಪಾಸ್‌ಮಾಡಿಕೊಳ್ಳಬೇಕು. ಸಚಿವರಾದ ಶ್ರೀ ಶಿವಕುಮಾರ್‌ರವರು ಸಹಕಾರ ಇಲಾಖೆಯ ಮಸೂದೆಯನ್ನು ಪಾಸ್ ಮಾಡಿಕೊಳ್ಳಬೇಕಾದರೆ ಮೂರು-ನಾಲ್ಕು ದಿವಸಗಳಲ್ಲಿ ಎಷ್ಟು ಕಸರತ್ತು ಮಾಡಿದರು ಎನ್ನುವುದು ನಿಮಗೆ ಗೊತ್ತಿದೆ. ಹಾಗೆಯೇ ಮಂತ್ರಿಗಳು ಇವತ್ತು ಸದನದಲ್ಲಿ ಇರುವುದು ಬೇಡವೇ? ಅವರವರ ಇಲಾಖೆಗಳ ಬೇಡಿಕೆಗಳನ್ನು ಮಂಡಿಸಿ ಇಲ್ಲಿ ಚರ್ಚೆ ಮಾಡುವಾಗ ಪುಗಸಟ್ಟೆ ದುಡ್ಡು ಬಂದು ಬಿಡುತ್ತದಾ? ಸಭೆ ಮಂಜೂರಾತಿಕೊಟ್ಟರೆ ತಾನೇ ದುಡ್ಡು ಬರುವುದು.

ಶ್ರೀ ಪಿ.ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಖಾಸಗಿ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ ತಾವೇ ಅಧ್ಯಕ್ಷರು. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಪ್ರತಿ ಶುಕ್ರವಾರ ಒಂದೆರಡು ಗಂಟೆ ಟೈಮ್ ಕೂಡಬೇಕೆಂದು ನಿಯಮ ಇದೆ. ಬಿಲ್‌ಗಳು ಇದ್ದಾವೆ, ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ನಾಲ್ಕು ರೆಸಲ್ಯೂಷನ್ಸ್ ಇದ್ದಾವೆ.

ಖಾಸಗಿ ನಿರ್ಣಯದ ಬಗ್ಗೆ ಚರ್ಚಿಸಲು ಸಮಯ ಕೊಡುತ್ತೀರಾ?

ಉಪಾಧ್ಯಕ್ಷರು: ಎರಡೂವರೆ ಗಂಟೆಯಿಂದ ಮೂರುವರೆ ಗಂಟೆಯವರೆಗೆ ಒಂದು ಗಂಟೆ ಸಮಯ ಆದಕ್ಕಾಗಿ ಕಾಯ್ದಿರಿಸೋಣ.